ಕ್ರಿ.ಮಿಸ್. ನಂ. **382 /2016**
ಪಿ.ಡಬ್ಲೂ : **2**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ ಶಹಾಪೂರ.**

| | | |
|---|---|---|
| ಹೆಸರು | : | ಜಗದೇವಿ |
| ತಂದೆ/ ಗಂಡನ ಹೆಸರು | : | ಶಿವುಕುಮಾರ ಜೇವರ್ಗಿ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಅಂಗನವಾಡಿ ಶಿಕ್ಷಕ |
| ವಾಸ | : | ಶಹಾಪೂರ |

ದಿನಾಂಕಃ **27-01-2024** ರಂದು ಸಾಕ್ಷಿದಾರನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ವಾದಿಯ ಪರವಾಗಿ ಶ್ರೀಮತಿ. ಬಿ.ಎಂ.ಆರ್. ವಕೀಲರಿಂದ :

ಅರ್ಜಿದಾರಳು ನನ್ನ ಮಗಳು. ಪ್ರಜ್ವಲ್ ನನ್ನ ಮೊಮ್ಮಗ. ಶಾಂತಕುಮಾರ ನನ್ನ ಅಳಿಯ ಆಗಿದ್ದ. ಪದ್ಮಾವತಿ ಶಾಂತಕುಮಾರ ಇವರ ತಾಯಿ. ಅನಿತಾ ಹಾಗೂ ಅನೀಲ್ ನನ್ನ ಮಗಳ ನಾದಿನಿ ಹಾಗೂ ಮೈದುನ ಆಗಿದ್ದರು. ನಾನು ನನ್ನ ಮಗಳನ್ನು ದೂರದ ಸಂಬಂಧಿಕರಾದ ಶಾಂತಕುಮಾರ ಇವರಿಗೆ ಮದುವೆ ಮಾಡಿ ಕೊಟ್ಟಿರುತ್ತೇನೆ. ಮದುವೆ ದಿನಾಂಕಃ **21.05.2010** ರಲ್ಲಿ ಬಸವೇಶ್ವರ ಕಲ್ಯಾಣ ಮಂಟಪ ಕಲಬುರಗಿಯಲ್ಲಿ ಆಗಿರುತ್ತದೆ. ಮದುವೆಯನ್ನು ನಾನೇ ಮಾಡಿಕೊಟ್ಟಿರುತ್ತೇನೆ. ಮದುವೆ ವೇಳೆಯಲ್ಲಿ **8** ತೋಲಾ ಬಂಗಾರ, **2** ಲಕ್ಷದ ಮನೆ ಬಳಕೆ ಸಾಮಾನು, ಮದುವೆಯನ್ನು ನಾನೇ ಮಾಡಿಕೊಟ್ಟಿರುತ್ತೇನೆ. ಮದುವೆ ಆದ ನಂತರ ನನ್ನ ಮಗಳು ಪೊಲೀಸ್ ಕ್ವಾಟರ್ಸನಲ್ಲಿ **7-8** ತಿಂಗಳ ವರೆಗೂ ಇದ್ದಳು, ನಂತರ ಆಕೆ ಗರ್ಭಿಣಿ ಆದಳು. ನನ್ನ ಮಗಳು ಗರ್ಭಿಣಿ ಇದ್ದಾಗ ಅವಳಿಗೆ ಕಿರಕುಳ ಕೊಡಲು ಪ್ರಾರಂಭಿಸಿದರು. ನನ್ನ ಮಗಳು ಶಹಾಪೂರದಲ್ಲಿ ಕಂಪ್ಯೂಟರ್ ಸ್ಥಂಸೆ ಹಾಕಿದ್ದಳು, ಅದ್ದರಿಂದ ಬಂದಂತಹ ಹಣವನ್ನು ಶಾಂತಕುಮಾರ ಇತನು ತೆಗೆದುಕೊಂಡು ಹೋಗುತ್ತಿದ್ದ. ಶಾಂತಕುಮಾರ ಬಂದಾಗೆಲ್ಲಾ ಹೊಡಿ ಬಡಿ ಮಾಡಿ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದ.

ಮಗು ಹುಟ್ಟಿದ ನಂತರ **5** ತಿಂಗಳ ವರೆಗೂ ಮಗಳನ್ನು ಕರೆದುಕೊಂಡು ಹೋಗಿರುವುದಿಲ್ಲ. ನಾವು ತಿಳಿಸಿದಾಗ ಅವಳನ್ನು ಹಾಗೂ ಮಗುವನ್ನು ತೊಟ್ಟಿಲ್ಲ ಕಾರ್ಯಕ್ರಮಕ್ಕೆ ಒಂದು ದಿನ ಕರೆದುಕೊಂಡು ಹೋಗಿರುತ್ತಾರೆ, ಮರು ದಿನ ಕಳಿಸಿಕೊಟ್ಟಿರುತ್ತಾರೆ. ನ್ಯಾಯ ಪಂಚಾಯಿತಿಯನ್ನು ಕಲಬುರಗಿಯ ಉದ್ಯಾನವನದಲ್ಲಿ ಆಗಿರುತ್ತದೆ, ಆಗ ನನ್ನ ಮಗಳನ್ನು ಸರಿಯಾಗಿ ನೋಡಿಕೊಳ್ಳುತ್ತೇವೆ ಎಂದು ಮಗಳನ್ನು ಕರೆದುಕೊಂಡು ಹೋಗಿರುವುದಿಲ್ಲ. ಮತ್ತೆ ಶಾಂತಕುಮಾರ ಇವರ ಮನೆಯಲ್ಲಿ ನ್ಯಾಯಪಂಚನಾಯಿತಿ ಆಗಿರುತ್ತದೆ ಆಗ ಸರಿಯಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ ಆದರೆ ನೋಡಿಕೊಂಡಿರುವುದಿಲ್ಲ.

ಶಾಂತಕುಮಾರು ಹಾಗೂ ಅವರ ಕುಟುಂಬ ಸದಸ್ಯರು ನನ್ನ ಮಗಳನ್ನು ಹೊಡೆದಿದಕ್ಕೆ ಠಾಣೆ ಹೋಗಿ ದೂರು ಕೊಡುವ ಪ್ರಯತ್ನ ಮಾಡಿರುತ್ತೇವೆ ಆದರೆ ಅವಳ ಮಾವ ಪೊಲೀಸ್ ಇಲಾಖೆಯಲ್ಲಿ ಇದಿದ್ದರಿಂದ ದೂರನ್ನು ಸ್ವೀಕರಿಸಿರುವುದಿಲ್ಲ. ಶಾಂತಕುಮಾರ ಇತನು ವಿಚ್ಛೇದನಕೊಸ್ಕರ ಅರ್ಜಿಯನ್ನು ಸಲ್ಲಿಸಿದ್ದ. ಆ ಪ್ರಕರಣದಲ್ಲಿ ನನ್ನ ಮಗಳಿಗೆ ಮೊಮ್ಮಗನಿಗೆ ಜೀವನಾಂಶ ಕೊಟ್ಟಿರುವುದಿಲ್ಲ. ಕಂಪ್ಯೂಟರ ಸ್ಥಂಸೆ ಈಗ ಇರುವುದಿಲ್ಲ, ಲಾಭ ಇಲ್ಲದೆ ಇರುವುದರಿಂದ ಮುಚ್ಚಿರುತ್ತೇವೆ. ಶಾಂತಕುಮಾರ ಇವರು ಮೋಬೈಲ್ ಶೋ ರೂಂ ನಲ್ಲಿ ಕೆಲಸ ಮಾಡುತ್ತಾರೆ. ಅವರು ಎರಡನೇ ಮದುವೆ ಆಗಿರುತ್ತಾರೆ. ಅವರ ಕೆಲಸದಿಂದ ತಿಂಗಳಿಗೆ **25** ಸಾವಿರ ಗಳಿಗೆ ಇರುತ್ತದೆ. ಅವರಿಗೆ ಸುಮಾರ **2** ಎಕರೆ ಜಮೀನು ಇರುತ್ತದೆ, ಅದರಿಂದ ವಾರ್ಷಿಕ ಆಧಾಯ **2-3** ಲಕ್ಷ ಇರುತ್ತದೆ. ನನ್ನ ಮಗಳಿಗೆ ಹಾಗೂ ಮೊಮ್ಮನಿಗೆ ಜೀವನಾಂಶ ಕೊಡುವ ಸಾಮರ್ಥ್ಯ ಇರುತ್ತದೆ. ನನ್ನ ಮಗಳು ಮನೆಯಲ್ಲಿ ಇರುತ್ತಾಳೆ. ನನಗೆ ನನ್ನ ಮಗಳನ್ನು ಹಾಗೂ ಮೊಮ್ಮಗನನ್ನು ನೋಡಿಕೊಳ್ಳಲು ಆಗುವುದಿಲ್ಲ.

<u>ಪಾಟೀ ಸವಾಲುಃ ತಕರಾರು ಸಲ್ಲಿಸಿರುವುದಿಲ್ಲ, ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜೆ.ಎಂ.ಎಫ್.ಸಿ. ಶಹಾಪೂರ